ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಒಂದುನೂರ ನಾಲ್ಕು

ಆ) ಆ ಪೈಕಿ ಬಿಳಿ ಆನೆಗಳು ಒಂದೂ ಇಲ್ಲ. ಆದ್ದರಿಂದ ಅವುಗಳನ್ನು ಅಭಿವೃದ್ಧಿಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಸಾಗರ ತಾಲ್ಲೂಕಿನಲ್ಲಿ ಅಕ್ರಮ ಕಡತದಿಂದ ಅರಣ್ಯ ನಾಶವಾಗುತ್ತಿರುವುದು

೩೬ (೨೭೮) ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಾಗರ ತಾಲೂಕಿನ ಮಳ್ಳೂರು ಪಂಚಾಯಿತಿ ಪ್ರದೇಶ ನಾಗವಳ್ಳಿ ಕೋಗಾರು ಪ್ರದೇಶ ಮಂಚಿನಕಾನು ಮುಂತಾದ ಕಡೆಗಳಲ್ಲಿ ಅಕ್ರಮ ಅರಣ್ಯ ಕಡಿತಲೆ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ, ಸದರಿ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಈ ಎರಡು ವರ್ಷಗಳಲ್ಲಿ ಅರಣ್ಯ ಮತ್ತು ಪೋಲೀಸ್ ಇಲಾಖೆಗಳಿಂದ ಹಿಡಿಯಲಾದ ಅಕ್ರಮ ಪ್ರಕರಣಗಳ ವಿವರಗಳನ್ನೊದಗಿಸುವುದು?

ಇ) 'ಅ' ಪ್ರಶ್ನೆಯಲ್ಲಿ ಆಡಕವಾದ ಪ್ರದೇಶಗಳಲ್ಲಿ ಇರುವ ಅಕ್ರಮ ಸಾಗುವಳಿ ಪ್ರದೇಶ ಎಷ್ಟು ? ಎಲ್ಲೆಲ್ಲಿ ಯಾವ ವರ್ಷದಿಂದ ಗುರುತಿಸಲಾಗಿದೆ ? ಏನು ಬೆಳೆ ಇದೆ ?

ಈ) ಸ್ಥಳೀಯ ಗ್ರಾಮೀಣ ಜನತೆ ಈ ಅಕ್ರಮ ಸಾಗುವಳಿದಾರರಿಂದ ಕಿರುಕುಳಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯಮಂತ್ರಿಗಳು).—

ಅ) ೩೩ ಪ್ರಕರಣಗಳು ಗಮನಕ್ಕೆ ಬಂದಿವೆ.

ಆ) ಈ ಎರಡು ವರ್ಷಗಳಲ್ಲಿ ಹಿಡಿಯಲಾದ ಅಕ್ರಮ ಪ್ರಕರಣಗಳು :

ಪೋಲೀಸ್ ಇಲಾಖೆಯಿಂದ	ಅರಣ್ಯ ಇಲಾಖೆಯಿಂದ
೧೯೮೨ ೩೨೪ ಪ್ರಕರಣಗಳು	೯೭ ಪ್ರಕರಣಗಳು
೧೯೮೩ ೨೧೩ ಪ್ರಕರಣಗಳು (ರಾಜ್ಯದ ಪೂರ್ಣ ಅಂಕಿ ಅಂಶಗಳು)	೧೦೧ ಪ್ರಕರಣಗಳು (ಶಿವಮೊಗ್ಗ ವೃತ್ತಕ್ಕೆ ಮಾತ್ರ ಸೀಮಿತ)

ಇ) ಯಾವುದೂ ಇಲ್ಲ

ಈ) 'ಇ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆ ಮಲೆನಾಡು ತಾಲ್ಲೂಕುಗಳಲ್ಲಿ ಅತಿವೃಷ್ಟಿ ಹಾಗೂ ಪ್ರವಾಹದಿಂದ ಉಂಟಾದ ನಷ್ಟದ ಬಗ್ಗೆ

೩೭ (೨೫೯) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಅತಿವೃಷ್ಟಿ ಮತ್ತು ಪ್ರವಾಹದಿಂದ ೧೯೮೦-೮೧, ೮೧-೮೨ ಹಾಗೂ ೮೨-೮೩ರಲ್ಲಿ ಶಿವಮೊಗ್ಗ ಜಿಲ್ಲೆ ಮಲೆನಾಡು ತಾಲ್ಲೂಕುಗಳಲ್ಲಿ ನೀರಾವರಿ, ರಸ್ತೆ ಸೇತುವೆ, ಖಾಸಗಿ ಆಸ್ತಿಗಳು ಇತ್ಯಾದಿಗಳಿಗುಂಟಾದ ನಷ್ಟ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)?

ಆ) ಪುನರ್‌ನಿರ್ಮಾಣ ಹಾಗೂ ಪರಿಹಾರ ಕಾರ್ಯಕ್ಕೆ ತೆಗೆದುಕೊಂಡ ಕಾಮಗಾರಿಗಳ ತಾಲ್ಲೂಕು ವಾರು ವಿವರಗಳನ್ನೊದಗಿಸುವುದು?

ಇ) ಮಂಜೂರಾಗಿ ಪೂರೈಸಲಾದ ಕಾಮಗಾರಿಗಳೆಷ್ಟು ಮತ್ತು ಇನ್ನೂ ಪೂರೈಸದೆ ಉಳಿದಿರುವ ಗಾಮಗಾರಿಗಳೆಷ್ಟು ? ಈ ಬಗ್ಗೆ ಅಗತ್ಯ ಹಣ ಒದಗಿಸಲಾಗಿದೆಯೇ ? ಹಾಗೂ ಉಳಿದ ಎಲ್ಲಾ ಕಾಮ ಕಾರಿಗಳನ್ನು ಯಾವಾಗ ಪೂರೈಸಲಾಗುವುದು ?

ಈ) ಮಂಜೂರಾಗದೆ ಇನ್ನೂ ಅನೇಕ ನಷ್ಟಕ್ಕೊಳಗಾದ ಮತ್ತು ಕೂಡಲೇ ಕಾಮಗಾರಿ ನಡೆಸದಿದ್ದರೆ ಇನ್ನೂ ಹೆಚ್ಚು ಹಾಳಾಗಿ ನಷ್ಟವಾಗುವಂತಿರುವ ಕಾಮಗಾರಿಗಳು ಎಷ್ಟಿವೆ ? ರಸ್ತೆ, ಸೇತುವೆ ಮತ್ತು ನೀರಾವರಿ ಕಾಮಗಾರಿ ಮತ್ತು ಈ ಬಗ್ಗೆ ಅಗತ್ಯವಾದ ಹಣ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಆ) ೧೯೮೦-೮೧, ೮೧-೮೨ ಮತ್ತು ೮೨-೮೩ ಸಾಲುಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನೀರಾವರಿ ರಸ್ತೆ ಮತ್ತು ಸೇತುವೆಗಳಿಗಾದ ನಷ್ಟ ಈ ಕೆಳಕಂಡಂತಿದೆ.

	ತಾಲ್ಲೂಕು	೧೯೮೦-೮೧	೮೧-೮೨	೮೨-೮೩	ಒಟ್ಟು ನಷ್ಟ
			(ಲಕ್ಷ ರೂಪಾಯಿಗಳಲ್ಲಿ)		
೧.	ಶಿವಮೊಗ್ಗ	—	೦.೧೯	೦.೫೬	೦.೭೫
೨.	ಹೊನ್ನಾಳಿ	—	—	—	—
೩.	ಭದ್ರಾವತಿ	—	—	—	—
೪.	ಚೆನ್ನಗಿರಿ	—	—	—	—
೫.	ತೀರ್ಥಹಳ್ಳಿ	—	—	೩.೨೧	೩.೨೧
೬.	ಸಾಗರ	೬.೭೧	—	೯.೬೧	೧೬.೩೨
೭.	ಹೊಸನಗರ	೧.೮೪	—	೧೩.೧೭	೧೫.೦೧
೮.	ಸೊರಬ	೦.೪೦	—	೧೩.೪೪	೧೩.೮೪
೯.	ಶಿಕಾರಿಪುರ	೧.೦೬	—	೧೬.೫೧	೧೭.೫೭
	ಒಟ್ಟು ನಷ್ಟ	೧೦.೦೧	೦.೧೯	೫೬.೫೦	೬೬.೭೦

ಆ) ವಿವರಗಳು ಈ ಕೆಳಕಂಡಂತಿವೆ.

	ತಾಲೂಕು	೧೯೮೦-೮೧	೧೯೮೧-೮೨	೧೯೮೨-೮೩	ಒಟ್ಟು
೧.	ಶಿವಮೊಗ್ಗ	—	೨	೪	೬
೨.	ಹೊನ್ನಾಳಿ	—	—	—	—
೩.	ಭದ್ರಾವತಿ	—	—	—	—
೪.	ಚೆನ್ನಗಿರಿ	—	—	—	—
೫.	ತೀರ್ಥಹಳ್ಳಿ	—	—	೧೮	೧೮
೬.	ಸಾಗರ	೧೨	—	೩೮	೫೦
೭.	ಹೊಸನಗರ	೧೦	—	೫೭	೬೭
೮.	ಸೊರಬ	೨	—	೭೪	೭೬
೯.	ಶಿಕಾರಿಪುರ	೩	—	೨೪	೨೭
	ಒಟ್ಟು	೨೭	೨	೨೧೫	೨೪೪

ಇ) ಮಂಜೂರಾಗಿ ಪೂರೈಸಲಾದ ಕಾಮಗಾರಿಗಳು—೫೬. ಮಂಜೂರಾಗಿ ಪೂರೈಸದೆ ಉಳಿದಿರುವ ಕಾಮಗಾರಿಗಳು—೧೮೮. ಈ ಬಗ್ಗೆ ಅಗತ್ಯ ಹಣ ಒದಗಿಸಿಲ್ಲ. ಉಳಿದ ಎಲ್ಲಾ ಕಾಮಗಾರಿಗಳನ್ನು ಸಾಕಷ್ಟು ಹಣವನ್ನು ಒದಗಿಸಿದ ಕೂಡಲೇ ಕಾರ್ಯಗತ ಮಾಡಿ ತ್ವರಿತವಾಗಿ ಪೂರೈಸಲಾಗುವುದು.

ಈ) ಮಂಜೂರಾಗದೆ ಇನ್ನೂ ಕೆಲಸಗಳು ಉಳಿದಿರುವುದರಿಂದ ಈ ಕೆಲಸಗಳನ್ನು ಪೂರೈಸಲು ಹಾಗೂ ಮಂಜೂರಾಗಿ ಅಪೂರ್ಣವಾಗಿರುವ ಕೆಲಸಗಳನ್ನು ಮುಗಿಸಲು ಈಗಿನ ದರದಲ್ಲಿ ಕ್ರಮವಾಗಿ ಸುಮಾರು ೫೫ ಮತ್ತು ೭೩ ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಶರಾವತಿ ಹಿನ್ನೀರಿನ ರಸ್ತೆ ದುರಸ್ತಿ ಬಗ್ಗೆ

೩೮ (೨೫೫೫) ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಾಗರ ತಾಲ್ಲೂಕು ಕರೂರು ಹೋಬಳಿ ಶರಾವತಿ ಯೋಜನೆಯ ಹಿನ್ನೀರಿನಿಂದ ಆವೃತವಾಗಿ ದ್ವೀಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಭಾಗಕ್ಕೆ ಹೊರಜಗತ್ತಿನಿಂದ ಸಂಪರ್ಕ ವ್ಯವಸ್ಥೆ ಸರಿಯಾಗಿ ಕಲ್ಪಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಈ ಶರಾವತಿ ಪುನರ್‌ವಸತಿ ಜನರಿಗಾಗಿ ಮಾಡಿದ ರಸ್ತೆಯು ವಿಸ್ತೀರ್ಣವೆಷ್ಟು ?

ಈ) ಈ ಸದರಿ ರಸ್ತೆಗಳು ಈಗ ಉಪಯೋಗ ಸ್ಥಿತಿಯಲ್ಲಿ ಇಲ್ಲದಿರುವ ಬಗ್ಗೆ ಸರ್ಕಾರಕ್ಕೆ ವರದಿಯಾಗಿದೆಯೇ ? ಇಂತಹ ರಸ್ತೆಗಳನ್ನು ಸರ್ಕಾರವೇ ವಹಿಸಿಕೊಂಡು ಆದ್ಯತೆಯ ಮೇಲೆ ಅಭಿವೃದ್ಧಿಪಡಿಸುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಹೌದು.

ಆ) ಈ ಭಾಗಕ್ಕೆ (ಕಾರೂರು ಹೋಬಳಿ) ಸಾಗರದಿಂದ ಹೋಗಲು ಸಮೀಪ ರಸ್ತೆ ಸಂಪರ್ಕವಿಲ್ಲವಾದ್ದರಿಂದ ಹೊಳೆ ಬಾಗಿಲಿನಿಂದ ಕಳಸವಳ್ಳಿಗೆ ನೀರಿನ ಮೂಲಕ ಹೋಗಲು ಪೋರ್ಟ್ ಇಲಾಖೆಯವರಿಂದ ಮೋಟಾರು ಲಾಂಚ್ ವ್ಯವಸ್ಥೆ ಇರುತ್ತದೆ ಮತ್ತು ಸಾಗರದಿಂದ ಕಾರ್ಗಲ್, ಕೋಗಾರ್ ಮೂಲಕ ಹೋಗಲು ಖಾಯಂ ರಸ್ತೆ ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ. ಹಾಗೂ ಹೊಸನಗರ ತಾಲ್ಲೂಕಿನಿಂದಲೂ ಲೋಕೋಪಯೋಗಿ ಇಲಾಖೆಯ ರಸ್ತೆ ಸಂಪರ್ಕವಿದೆ.

ಇ) ೧೩೩.೦೦ ಕಿಲೋಮೀಟರ್.

ಈ) ವರದಿ ಬಂದಿದೆ ಹಾಗೂ ಅತಿ ಮುಖ್ಯವಾದ ೬ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳಲಾಗಿದೆ. ಇನ್ನುಳಿದ ೨೮ ರಸ್ತೆಗಳನ್ನು ಆರ್ಥಿಕ ಪರಿಸ್ಥಿತಿಯನ್ನು ಮತ್ತು ಪ್ರಾಮುಖ್ಯತೆಯನ್ನು ಅವಲಂಬಿಸಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಗಣಿಸಲಾಗುವುದು.

ಅಧ್ಯಕ್ಷರು: ಪ್ರಶ್ನೋತ್ತರಗಳ ಪಟ್ಟಿಯಂನ್ನು ಮುಂದಿಸಲಾಗಿದೆ. ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೨ನೇ ಇಸವಿಯ ಚಿಟ್ ಫಂಡ್ಸ್ ಶಾಸನದ ೪೯ನೇ ಕಲಮಿನ ಮೇರೆಗೆ ೧೯೮೩ನೇ ಇಸವಿಯ ಚಿಟ್‌ಫಂಡ್ಸ್ (ಕರ್ನಾಟಕ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ ೨-೧-೧೯೮೪ರಂದು ಹೊರಡಿಸಲಾದ ಆರ್.ಡಿ.ಸಿ. ೫೬ ಸಿ.ಎಂ.ಎಲ್. ೮೩ನೇ ಅಧಿಸೂಚನೆ ಹಾಗೂ ೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಶಾಸನದ ೧೩೦ನೇ ಕಲಮಿನ ಮೇರೆಗೆ ೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ